# ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ,

**ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ (ನೋಂ.)**

**(ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನಗಳ ಉನ್ನತ ಸಂಸ್ಥೆ)**

ದಕ್ಷಿಣ ಆಸ್ಪತ್ರೆಗಳ ಸಂಕೀರ್ಣ, ಧರ್ಮರಾಮ್ ಕಾಲೇಜು ಅಂಚೆ (ನಿಮ್ಹಾನ್ಸ್ ಹತ್ತಿರ), ಬೆಂಗಳೂರು 560 029

## ಸಂಸ್ಥೆಯಲ್ಲಿ ಖಾಲಿಯಿರುವ ವಿವಿಧ ವೃಂದದ ಗ್ರೂಪ್–ಸಿ ವರ್ಗದ ಹುದ್ದೆಗಳ ನೇಮಕಾತಿ ಮಾಹಿತಿ ವಿವರ


| ಕ್ರಮ ಸಂಖ್ಯೆ | ಮಾಹಿತಿ ವಿವರ | ಪುಟ ಸಂಖ್ಯೆ |
|---|---|---|
| 1 | ಅಧಿಸೂಚನೆ<br>1. ಹುದ್ದೆಗಳ ವರ್ಗ, ಖಾಲಿ ಹುದ್ದೆಗಳ ಸಂಖ್ಯೆ ವಿದ್ಯಾರ್ಹತೆ<br>2. ಮೀಸಲಾತಿ ವರ್ಗೀಕರಣ ಕೋಷ್ಟಕ – ಎ & ಬಿ | 1 – 5 |
| 2 | ಆಯ್ಕೆ ವಿಧಾನ | 5 –6 |
| 3 | ವಯೋಮಿತಿ | 7 – 9 |
| 4 | **ಮೀಸಲಾತಿ**<br>1) ಜಾತಿ ಮೀಸಲಾತಿ<br>2) ಗ್ರಾಮೀಣ ಅಭ್ಯರ್ಥಿ ಮೀಸಲಾತಿ<br>3) ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿ<br>4) ಯೋಜನಾ ನಿರಾಶ್ರಿತ ಅಭ್ಯರ್ಥಿ ಮೀಸಲಾತಿ<br>5) ಅಂಗವಿಕಲ ಅಭ್ಯರ್ಥಿ ಮೀಸಲಾತಿ<br>6) ಹೈದರಬಾದ್ – ಕರ್ನಾಟಕ ಪ್ರದೇಶದ ಅಭ್ಯರ್ಥಿ ಮೀಸಲಾತಿ | 9 – 11 |
| 5 | ಕನ್ನಡ ಭಾಷಾ ಪರೀಕ್ಷೆ: | 12 |
| 6 | ಅರ್ಹತಾ ಷರತ್ತುಗಳು | 13 |
| 7 | ಪಿಂಚಣಿ ಸೌಲಭ್ಯ | 13 |
| 8 | ನಿಗಧಿತ ಅರ್ಜಿ ಶುಲ್ಕ ಹಾಗೂ ಸೂಚನೆಗಳು | 13 – 14 |
| 9 | ಪ್ರಾಮುಖ್ಯವಾದ ಸೂಚನೆಗಳು ಹಾಗೂ ವಿಶೇಷ ಸೂಚನೆಗಳು | 15 – 16 |
| 10 | ದುರ್ನಡತೆ | 17 |
| 11 | ಅಭ್ಯರ್ಥಿಗೆ ಸಂಬಂಧಿಸಿದ ಮೀಸಲಾತಿ ಅರ್ಜಿ ನಮೂನೆಗಳು | 18 – 28 |

ದೂರವಾಣಿ : 080-22443143
080-22442421
ಫ್ಯಾಕ್ಸ್ : 080-26541799

# ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ (ನೋಂ.)
(ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನಗಳ ಉನ್ನತ ಸಂಸ್ಥೆ)
ದಕ್ಷಿಣ ಆಸ್ಪತ್ರೆಗಳ ಸಂಕೀರ್ಣ, ಧರ್ಮರಾಮ್ ಕಾಲೇಜು ಅಂಚೆ (ನಿಮ್ಹಾನ್ಸ್ ಹತ್ತಿರ), ಬೆಂಗಳೂರು – 560 029
e-mail : ihealthchild@yahoo.in - Website : www.igch.org

ಸಂಖ್ಯೆ: ಇಂಗಾಮಆಸಂ/ಡಿಆರ್‌ಸಿ/(1)/2014–15 ದಿನಾಂಕ:09.01.2015

## ಅಧಿಸೂಚನೆ

**ವಿಷಯ:** ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಖಾಲಿಯಿರುವ ವಿವಿಧ ಗ್ರೂಪ್ 'ಸಿ' ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸುವ ಕುರಿತು.

*******

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ದಕ್ಷಿಣ ಆಸ್ಪತ್ರೆಗಳ ಸಂಕೀರ್ಣ, ಧರ್ಮಾರಾಂ ಕಾಲೇಜು ಅಂಚೆ, ಬೆಂಗಳೂರು–560029, ಇಲ್ಲಿ ಖಾಲಿ ಇರುವ ವಿವಿಧ ವೃಂದದ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ನಿಗದಿತ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಗಣಕೀಕೃತ ಆನ್–ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವೆಬ್‌ಸೈಟ್ https://www.karnataka.gov.in/dmekarnataka ಮುಖಾಂತರವೇ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

1. **ಹುದ್ದೆಗಳ ವರ್ಗ, ಖಾಲಿ ಹುದ್ದೆಗಳ ಸಂಖ್ಯೆ ಮತ್ತು ವಿದ್ಯಾರ್ಹತೆ:–**

| ಕ್ರ.ಸಂ. | ವೃಂದಗಳ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1. | ಶುಶ್ರೂಷಕಿ | 40 | 1. ಡಿಪ್ಲಮೋ ಇನ್ ಜನರಲ್ ನರ್ಸಿಂಗ್.<br>2. ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೋಂದಾಯಿತ ಪ್ರಮಾಣ ಪತ್ರ ಹೊಂದಿರಬೇಕು. |
| 2. | ಮೆಡಿಕಲ್ ರೆಕಾರ್ಡ್ ತಂತ್ರಜ್ಞರು | 1 | 1. ಪಿ.ಯು.ಸಿ. ಅಥವಾ ತತ್ಸಮಾನ.<br>2. ಕರ್ನಾಟಕದಲ್ಲಿನ ಯಾವುದೇ ಸರ್ಕಾರದ ವೈದ್ಯಕೀಯ ಕಾಲೇಜು ಅಥವಾ ಮಾನ್ಯತೆ ಹೊಂದಿರುವ ಸಂಸ್ಥೆಯಿಂದ ಮೆಡಿಕಲ್ ರೇಕಾರ್ಡ್ ಟೆಕ್ನಾಲಜಿಯಲ್ಲಿ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು. |
| 3. | ಲೈಬ್ರರಿಯನ್ | 1 | ಕರ್ನಾಟಕ ಸರ್ಕಾರದ ಮಾನ್ಯತೆ ಹೊಂದಿರುವ ಸಂಸ್ಥೆಯಲ್ಲಿ ಡಿಪ್ಲಮೋ ಇನ್ ಲೈಬ್ರರಿ ಸೈನ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು. |